ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 13th March 1969.

The House met in the Assembly Chamber, Vidhana Soudha, Bangalore at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Aerial Spraying of Insecticides in Mandya Taluk

97. Sri N. A. CHANNE GOWDA (Pandavapur).—

Will the Minister for Agriculture be pleased to state :—

(*a*) the number of times aerial spraying of insecticides was done in Mandya taluk ;

(*b*) the total expenditure incurred for this work (separate figures *re.* : aeroplane charges, cost of insecticides and other expenditures may kindly be furnished) ;

(*c*) the extent of land to which the insecticides were sprayed;

(*d*) Out of this total expenditure

(i) the share of the centre
(ii) the share of the State Government
(iii) the share of the Taluk Development Board and
(iv) the amount received from the ryots ;

(*e*) the person who supplied these insecticides ; whether tender was called for in this behalf ; if so, when the persons who had given tenders whether the tenderor whose tender was accepted had quoted the lowest rate ;

(*f*) whether a technical report was obtained for aerial spraying of insecticide ; if so, whether the report would be made available to the members ;

(SRI N. A. CHANNE GOWDA)

(*g*) whether timely spraying of insecticides was done from a fixed altitude as per the report;

(*h*) the benefit derived due to aerial spraying of insecticides; whether agricultural diseases have not been reported now from that place;

(*i*) whether they have chalked out a programme for aerial spraying of insecticides in other taluks of this district?

Sri B. RACHAIAH (Minister for Agriculture).—

(*a*) Four times.

(*b*) Total expenditure	...	Rs. 3,43,500
Towards insecticide	...	2,43,500
Towards aeroplane	...	60,000
Other expenditure	...	40,000

(*c*) 5,000 acres; four times.

(*d*) (i) Central share	...	1,15,350
(ii) States' share	...	1,63,350
(iii) Taluk Development Board and other expenditure.	...	50,000
(iv) From Ciba Company	...	12,800
Total	...	Rs. 3,43,500

(*e*) Medicines which were stocked by the Government were used and hence there was no necessity for calling tender.

(*f*) Has been done as per the suggestions made by the departmental experts.

(*g*) Except the trouble due to rain and mechanical trouble of the aeroplane, the medicine was prayed as per the scheduled programme.

(*h*) There is an expectation of getting an excess yield of three quintals of paddy per acre and no report regarding attack of insects, pests and diseases in that area is received.

(*i*) Arrangement could be made for aerial spraying of insecticide in other taluks also in case the ryots or other societies or organisations were to share half the expenditure of aeroplane and medicines.

ಶ್ರೀ ಎನ್. ಎ. ಚನ್ನೇಗೌಡ —ಸ್ವಾಮಿ, ಮಂಡ್ಯ ತಾಲ್ಲೂಕಿನಲ್ಲಿ ವಿಮಾನದಿಂದ ಸರ್ಕಾರದ ದಾಸ್ತಾನಿನಲ್ಲಿದ್ದ ಕ್ರಿಮಿನಾಶಕ ಔಷಧಿಗಳನ್ನು ಉಪಯೋಗಿಸಲಾಯಿತು ಎಂದು ಹೇಳಿದ್ದೀರಿ, ಅದು ಯಾವ ದಾಸ್ತಾನಿನಲ್ಲಿದ್ದ ಔಷಧಿ, ಯಾರು ಅದನ್ನು ಸಪ್ಲೈ ಮಾಡಿದರು, ಆ ಔಷಧಿಯ ಬೆಲೆಯೇನು?

ಶ್ರೀ ಬಿ. ರಾಚಯ್ಯ.—ಕಳೆದ ಫೆಬ್ರುವರಿ ತಿಂಗಳಿನಲ್ಲಿ ಹೋದಸಾರಿ ಕೊಂಡುಕೊಂಡಿದ್ದ ಔಷಧಿ ಸ್ಟಾಕ್ ಇತ್ತು ಅದನ್ನು ಉಪಯೋಗಿಸಿದ್ದಾರೆಂದು ವರದಿ ಬಂದಿದೆ. ಅದರಲ್ಲಿ ಎರಡು ಔಷಧಿಗಳು ಇವೆ ಒಂದು ಡೆಮಾಕ್ರಾವ್, ಇನ್ನೊಂದು ಕುಮಾ ಪ್ರಾಡಕ್ಟ್ಸ್. ಈ ಔಷಧಿಯನ್ನು ಸೀವಾ ಕಂಪೆನಿಯವರಿಂದ ರೇಟ್ ಕಾಂಟ್ರಾಕ್ಟ್ ಮೇಲೆ ಹೋದ ವರ್ಷ ಕೊಂಡುಕೊಂಡಿದ್ದಾರೆ. ಆ ಔಷಧಿಯನ್ನು ಉಪಯೋಗಿಸಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಹೋದ ವರ್ಷ ಕೊಂಡುಕೊಂಡಿದ್ದಂತಹ ಔಷಧಿಯನ್ನು ಸಿಂಪಡಿಸಿದ್ದಾರೆಂದು ಹೇಳಿದ್ದೀರಿ. ಆ ಔಷಧಿಯನ್ನೇನಾದರೂ ಖರ್ಚು ಮಾಡುವುದಕ್ಕೋಸ್ಕರ ವಿಮಾನದಿಂದ ಸಿಂಪಡಿಸಲಾಯಿತೇ ಅಥವಾ ಆ ಕಂಪೆನಿಯವರಿಗೆ ಹೆಚ್ಚಿನ ವ್ಯಾಪಾರವನ್ನು ಕಲ್ಪಿಸುವುದಕ್ಕೋಸ್ಕರ ಆ ಔಷಧಿಯನ್ನು ಸಿಂಪಡಿಸಲಾಯಿತೇ, ರೈತರಿಗೆ ಅನುಕೂಲವಾಗುವ ಹಾಗೆ ಸಾಲದಲ್ಲಿ ನೋಡಿ ವಿಮಾನದ ಮೂಲಕ ಔಷಧಿಯನ್ನು ಸಿಂಪಡಿಸಬೇಕೆಂದು ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಅಲ್ಲಿನ ರೈತರು ಆ ಒಂದು ರೀತಿಯಲ್ಲಿ ವಿಮಾನದಿಂದ ಔಷಧಿಯನ್ನು ಸಿಂಪಡಿಸಬೇಕೆಂದು ಮನಸಿಮಾಡಿಕೊಂಡಮೇಲೆ ನಾವು ಆ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ, ಅದರಂತೆ ಕೆ. ಆರ್. ನಗರದವರು ನಮಗೂ ಬೆಳೆಗಳ ಮೇಲೆ ವಿಮಾನದಿಂದ ಔಷಧಿಯನ್ನು ಸಿಂಪಡಿಸಬೇಕು ಎಂದು ಕೊನೆಯಲ್ಲಿ ಕೇಳಿದರು. ಆಗ ನಾವು ಅವರಿಗೆ ಹೇಳಿದೆವು ಈಗ ಆಗುವುದಲ್ಲಿ ಕಾಲ ಮೀರಿದೆ, ಎಂದು. ಈ ದೃಷ್ಟಿಯಿಂದ ಮಂಡ್ಯಾ ತಾಲ್ಲೂಕು ಬೋರ್ಡಿನವರು ಮುಂಚಿತವಾಗಿಯೇ ದುಡ್ಡು ಕೊಟ್ಟಿದ್ದಾರೆ. ಅವಕ್ಕೆ ರೈತರು ಒಪ್ಪಿಗೆ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆಗಿ ಅವರು ನಮಗೆ ಮನವಿ ಮಾಡಿಕೊಂಡಮೇಲೆ ವಿಮಾನದಿಂದ ಔಷಧಿಯನ್ನು ಸಿಂಪಡಿಸಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಆ ರೀತಿ ವಿಮಾನದಲ್ಲಿ ಔಷಧಿಯನ್ನು ಬೆಳೆಗಳಮೇಲೆ ಸಿಂಪಡಿಸಬೇಕಾದರೆ 12 ಅಡಿ ಎತ್ತರದಿಂದ ಸಿಂಪಡಿಸಿದರೆ ಅದು ಪರಿಣಾಮಕಾರಿಯಾಗಿ ಆಗುತ್ತದೆ ಎಂದು ತಜ್ಞರ ಅಭಿಪ್ರಾಯ ಇದೆ. ಆದರೆ ಇವರು 60 ಅಡಿ ಎತ್ತರದಿಂದ ಔಷಧಿಯನ್ನು ಸಿಂಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಆ ರೀತಿ ವಿಮಾನದಿಂದ ಔಷಧಿಯನ್ನು ಸಿಂಪಡಿಸುವಾಗ ಬೇಕಾದಷ್ಟು ದನಕರುಗಳು ಸತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ದನಕರುಗಳು ಸತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ತಜ್ಞರು ಯಾವ ಪ್ರಮಾಣದಲ್ಲಿ ಯಾವ ಮಟ್ಟದಲ್ಲಿ ವಿಮಾನವನ್ನು ಏರಿಸಿ ಅದರ ಮುಖಾಂತರ ಔಷಧಿಯನ್ನು ಸಿಂಪಡಿಸಬೇಕೆಂದು ಹೇಳಿದ್ದರೋ ಆ ಪ್ರಕಾರ ಮಾಡಿದ್ದಾರೆಂದು ವರದಿ ಬಂದಿದೆ.

ಶ್ರೀ ಎಂ. ನಾಗಪ್ಪ.—ನಿಯಮದ ಪ್ರಕಾರ ಬೆಳೆ 15—20 ದಿವಸಗಳ ಬೆಳೆ ಇದ್ದಾಗ ಮಾತ್ರ ಆ ರೀತಿ ಔಷಧಿಯನ್ನು ಸಿಂಪಡಿಸಿದರೆ ಅದರಿಂದ ಉಪಯೋಗವಾಗುತ್ತದೆ ಎಂದು ತಜ್ಞರ ಅಭಿಪ್ರಾಯವಾಗಿದೆ. ಈಗ ಯಾವ ರೀತಿಯಲ್ಲಿ ಯಾವ ಔಷಧಿಯನ್ನು ಸಿಂಪಡಿಸಿದ್ದಾರೆಯೋ ಆ ರೀತಿ ಔಷಧಿಯನ್ನು ಸಿಂಪಡಿಸುವುದಾದರೆ ಅದರಿಂದ ಹೆಚ್ಚಿನ ಹಾನಿಯಾಗುತ್ತದೆ ಎಂದು ದೆಹಲಿಯಲ್ಲಿ ನಡೆದ ಕಾನ್‌ಫರೆನ್ಸಿನವರ ಅಭಿಪ್ರಾಯವಾಗಿದೆ. ಆದ್ದರಿಂದ ಈಗ ಅನುಸರಿಸುತ್ತಿರುವ ನೀತಿಯನ್ನು ಕೈಬಿಡುತ್ತೀರಾ ಹೇಗೆ, ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಬಿ. ರಾಚಯ್ಯ.—ಮಂಡ್ಯಾಜಿಲ್ಲೆಯ ರೈತರಿಂದ ಸರ್ಕಾರಕ್ಕೆ ಆ ರೀತಿಯ ವರದಿ ಸರ್ಕಾರಕ್ಕೆ ಬಂದಿಲ್ಲ. ಅದನ್ನು ಉಪಯೋಗಿಸುವುದರಿಂದ ನಷ್ಟವಾಗುತ್ತದೆ ಅದು ಬೇಡ ಎಂದು ಹೇಳಲಿಲ್ಲ. ಆ ರೀತಿ ಆ ಔಷಧಿಯನ್ನು ಉಪಯೋಗಿಸುವುದರಿಂದ ಒಂದು ಎಕರೆಗೆ ಸುಮಾರು 3 ಕ್ವಿಂಟಾಲ್ ಇಳುವಳಿ ಜಾಸ್ತಿ ಬಂದಿದೆ ಎಂದು ತಿಳಿಸಿದ್ದಾರೆ.

ಶ್ರೀ ಜಿ. ನಾರಾಯಣಗೌಡ.—ಮಂಡ್ಯಾದಲ್ಲಿ ಆ ಪ್ರದೇಶದಲ್ಲಿ ವಿಮಾನ ಮುಖಾಂತರ ಔಷಧಿಯನ್ನು ಸ್ಪೈ ಮಾಡುತ್ತೇವೆ ಅದಕ್ಕೋಸ್ಕರ ಆ ಕಾಲದಲ್ಲಿ ದನಕರುಗಳಾಗಲೀ ಜನರಾಗಲೀ ಮಕ್ಕಳಾಗಲೀ ಆ ಪ್ರದೇಶದಲ್ಲಿ ಯಾರೂ ಇರಕೂಡದು ಎಂದು ಜನಗಳಿಗೆ ತಿಳುವಳಿಕೆಯನ್ನು ಕೊಟ್ಟಿದ್ದಿರಾ ?

ಶ್ರೀ ಬಿ. ರಾಚಯ್ಯ.—ಹೌದು ಕೊಟ್ಟಿದೆ. ವಿಮಾನದ ಮುಖಾಂತರ ಆ ಪ್ರದೇಶದಲ್ಲಿ ಔಷಧಿಯನ್ನು ಸಿಂಪಡಿಸುವ ಕಾಲದಲ್ಲಿ ಯಾರೂ ಇರಬಾರದು ಎಂದು ಜನಗಳಿಗೆ ತಿಳುವಳಿಕೆಯನ್ನು ಕೊಟ್ಟಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಅಲ್ಲಿ ಉಪಯೋಗಿಸಿದಂತಹ ಔಷಧಿಯ ಸತ್ಯ ಅರ್ಧ ಅಗಲೇ ಕಡಿಪೆಯಾಗಿತ್ತು, ಅದರಿಂದ ಪೈರಿಗೆ ಅನುಕೂಲವಾಗಿಲ್ಲ ಎಂದು ವರದಿ ಬಂದಿರುವುದು ನಿಜವೇ ? ಹಾಗಿದ್ದರೆ ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಮಂಡ್ಯಾದಲ್ಲಿ ಆ ರೀತಿ ಔಷಧಿಯನ್ನು ಸಿಂಪಡಿಸಿದ್ದರಿಂದ ರೈತರಿಗೆ ಉಪಯೋಗವಾಗಿದೆ ಎಂದು ವರದಿ ಬಂದಿದೆ. ಅದನ್ನು ಉಪಯೋಗ ಮಾಡಬೇಡಿ ಅದರಿಂದ ನಮಗೆ ನಷ್ಟವಾಗುತ್ತದೆ ಎಂದು ಅವರು ಹೇಳಿಲ್ಲ.

ಶ್ರೀ ಎಂ. ಬಸವರಾಜು.—ಹೋದವರ್ಷ ಈ ರೀತಿ ಕ್ರಿಮಿನಾಶಕಗಳನ್ನು ಸಿಂಪಡಿಸಿದ್ದರಿಂದ ಉತ್ತಮ ಪ್ರತಿಫಲ ಬಂದಿದೆ ಎಂದು ಅಲ್ಲಿಯ ರೈತರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆಂದು ಈಗ ಹೇಳಿದಿರಿ. 1969ನೇ ಇಸವಿಯಲ್ಲಿ ಇದೇ ರೀತಿ ಬೇರೆ ಭಾಗಗಳಲ್ಲಿಯೂ ಸಹ ಮಾಡುವುದಕ್ಕೆ ಏರ್ಪಾಡನ್ನು ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಕೃಷ್ಣ ರಾಜನಗರ ತಾಲ್ಲೂಕ್‌ನಿಂದ ಈ ರೀತಿ ಮಾಡಬೇಕೆಂದು ಒಂದು ಮನವಿ ಬಂದಿತ್ತು. ಅದರೆ ಕಾಲ ವಿಾರಿ ಹೋಗಿದ್ದರಿಂದ ಇದರ ಒಂದು ಉಪಯೋಗವನ್ನು ಒದಗಿಸುವುದಕ್ಕೆ ಆಗಲಿಲ್ಲ. ಈ ವರ್ಷ ಆ ಭಾಗದವರು ಬೇಕು ಎಂದು ಕೇಳಿದರೆ 5-10 ಎಕರೆ ಗಳನ್ನು ಒಟ್ಟಾಗಿ ತೆಗೆದುಕೊಂಡು ಔಷಧವನ್ನು ಸಿಂಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ರೀತಿ ಔಷಧವನ್ನು ಸಿಂಪಡಿಸುವುದರಿಂದ ಎಕರೆಗೆ 85 ರೂಪಾಯಿಗಳವರೆಗೂ ಖರ್ಚಾಗುತ್ತದೆ ಎಂದು ಹೇಳಿದ್ದೀರಿ. ರೈತರು ಏನು ಅಭಿಪ್ರಾಯ ಪಡುತ್ತಾರೆಂದರೆ, ಇದೇ ಹಣವನ್ನು ನಮಗೇ ನಬ್ಸಿಡಿ ರೂಪದಲ್ಲಿ ಕೊಟ್ಟರೆ ನಾವೇ ಔಷಧವನ್ನು ಸಿಂಪಡಿಸಿಕೊಳ್ಳುತ್ತೇವೆ, ವಿಮಾನದಿಂದ ಸಿಂಪಡಿಸಿದರೆ ಕೆಲವು ಭಾಗಗಳಿಗೆ ಬೀಳುವುದಿಲ್ಲವೆಂದು ಹೇಳುತ್ತಾರೆ. ಈಗ ನಾನಾ ಭಾಗಗಳಿಂದ ಸುಮಾರು 3,43,500 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ಮುಂದೆ ಇದೇ ಹಣವನ್ನು ನಬ್ಸಿಡಿ ರೂಪದಲ್ಲಿ ರೈತರಿಗೆ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್ ಪ್ರಕಾರ ಕೇಂದ್ರದಿಂದ ಈ ರೀತಿಯ ಕೆಲಸಗಳಿಗೆ ಸಹಾಯ ಸಿಗುತ್ತದೆ. ಹತ್ತಾರು ಎಕರೆಗಳಲ್ಲಿ ಬೆಳೆಗೆ ರೋಗ ಬಂದಾಗ ಕೆಲವರು ಔಷಧವನ್ನು ಉಪಯೋಗ ಮಾಡಿ ಮತ್ತೆ ಕೆಲವರು ಮಾಡದಿದ್ದರೆ ಅದರಿಂದ ಹೆಚ್ಚಿನ ಉಪಯೋಗ ವಾಗುವುದಿಲ್ಲ. ಆದಕಾರಣ ಕಾಂಪ್ಯಾಕ್ಟ್ ಏರಿಯಾವನ್ನು ಸೇರಿಸಿಕೊಂಡು ಒಂದೇ ಸಾರಿ ಔಷಧ ವನ್ನು ಸಿಂಪಡಿಸುವುದರಿಂದ ಹೆಚ್ಚಿನ ಪರಿಣಾಮ ಉಂಟಾಗುತ್ತದೆಂದು ತಿಳಿದುಬಂದಿದೆ. ಮತ್ತು ಆ ರೀತಿ ಮಾಡಬೇಕೆಂದು ಕೇಂದ್ರಸರ್ಕಾರದ ಆದೇಶವೂ ಇದೆ.

Sanction of Loans To Private Industrialists

233. **Sri H. SIDDAVEERAPPA** [(Harihar).—

Will the Minister for Industries, Information and Publicity be pleased to state :—

(*a*) the number of industries in the private sector that are given loans by the Government of Mysore, since January 1957, upto end of December 1967 (Yearwise figures may kindly be furnished with the details of the industrialist that are given loans and the amount sanctioned to each together with the rate of interest and purpose for which the loan is sanctioned) ;

(*b*) the amount if any outstading from each of the above ;

(*c*) for how many industrialists in the private sector the Government have stood sureties for the loans borrowed by these industrialists from the Banks and other Companies if any ; (Details of each case and the amount involved may be furnished) ;

(*d*) in how many cases, if any, have the Government repaid to the creditors the loans for which they have stood as sureties and the amount thus paid ; (details may be furnished in each case) ;